# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.46 No:50 ENGLISH DAILY Subscription Yearly - Rs. - MONDAY 20-9-2021



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಶ್ರೀಲಂಕಾದ ಆಮದು ಕಾಳುಮೆಣಸು ಲಭ್ಯತೆ, ದರ ದುರ್ಬಲ

ಮತ್ತೆ ಮಾರುಕಟ್ಟೆಯಲ್ಲಿ ಆಮದಾದ ಶ್ರೀಲಂಕಾ ಮೂಲದ ಕಾಳುಮೆಣಸು ಲಭ್ಯವಾಗುತ್ತಿರುವುದರಿಂದ ದರ ಏರಿಕೆಗೆ ತಡೆಯಾಗಿ ದರ ಇಳಿಕೆ ಕಂಡಿದೆ. ಮೂಲಗಳ ಪ್ರಕಾರ ಈ ಹಿಂದೆ ಶ್ರೀಲಂಕಾದಿಂದ ಆಮದಾಗಿ ತಡೆಹಿಡಿಯಲ್ಪಟ್ಟಿದ್ದ ಸುಮಾರು 500 ಟನ್ ಗಳಷ್ಟು ಕಾಳುಮೆಣಸು ಈಗ ಆಮದುದಾರರಿಗೆ ಬಿಡಲ್ಪಟ್ಟಿದೆಯೆನ್ನಲಾಗಿದೆ. ಈ ವರ್ಷ ಶ್ರೀಲಂಕಾದ ಕಾಳುಮೆಣಸು ಬೆಳೆ ಉತ್ತಮವಿದ್ದು 25000 ಟನ್ ಗಳಷ್ಟು ಉತ್ಪಾದನೆಯಾಗಬಹುದೆನ್ನಲಾಗಿದೆ. ಹಿಂದಿನ ವರ್ಷದ ದಾಸ್ತಾನು 12000 ಟನ್ ಗಳಾಗಬಹುದೆನ್ನಲಾಗಿದ್ದು, ಶ್ರೀಲಂಕಾದ ಬೇಡಿಕೆ 12000 ಟನ್ ಗಳಾಗಬಹುದೆನ್ನಲಾಗಿದೆ. ಇದರಿಂದ ಈ ವರ್ಷ ಶ್ರೀಲಂಕಾದಿಂದ 25000 ಟನ್ ಗಳು ರಫ್ತಿಗೆ ಲಭ್ಯವಾಗಬಹುದು. ಮುಂದಿನ ವರ್ಷದ ಆರಂಭದಲ್ಲಿ ಭಾರತದ ಹೊಸಬೆಳೆಯು ಆವಕವಾಗಲಿದೆ. ಮಾರುಕಟ್ಟೆಗೆ ಪೂರೈಕೆ ಸಾಕಷ್ಟು ಆಗುತ್ತಿರುವುದರಿಂದ ಬೇಡಿಕೆಯಿದ್ದರೂ ದರ ಹೆಚ್ಚಳವಾಗುತ್ತಿಲ್ಲ.